

## ನಕ್ಕುಬಿಡಿ

ಗುಂಡ: ಒಂದು ಮಠದ ಹೆಸರು ಕೇಳಿದ್ರೆ, ರಾಜ್ಯದ ಮಂತ್ರಿಗಳಿಗೆ ನಡುಕವಂತೆ.
ಗೆಳೆಯ: ಬಿಡದಿ ಮಠನಾ?
ಗುಂಡ: ಅಲ್ಲ
ಗೆಳೆಯ: ಮತ್ಯಾವುದು ಅಂತಹ ಮಠ?
ಗುಂಡ: ಎಸ್.ಆರ್. ಹಿರೇಮಠ.

★★★

ಪೊಲೀಸ್: ಫುಟ್‌ಪಾತ್ ಮೇಲೆ ಹೋಗ್ರಿ, ರಸ್ತೇಲಿ ಹೋಗೋದು ಅಪಾಯ.
ಗುಂಡ: ಫುಟ್‌ಪಾತೇ ಹೆಚ್ಚು ಅಪಾಯ ಸಾರ್, ಸಾಲಕೊಟ್ಟವರು ಎದುರಿಗೆ ಸಿಕ್ತಿರ್ತಾರೆ.

★★★

ಗೆಳೆಯ: ಗುಂಡು ಸಿಕ್ಕುವ ಜಾಗಕ್ಕೂ, ವಕೀಲರು ಸಿಕ್ಕುವ ಜಾಗಕ್ಕೂ ಒಂದೇ ಹೆಸರಿಟ್ಟಿದ್ದಾರಲ್ಲ. ಏಕಿರಬಹುದು?
ಗುಂಡ: ಕೇಸು ಗೆದ್ರೆ ಸೆಲೆಬ್ರೇಟ್ ಎಲ್ಲಿ ಮಾಡ್ತಾರೋ, ಅಲ್ಲೇ ಸೋತಾಗ ಗುಂಡು ಹಾಕ್ತಾರೆ. ಅಲ್ವ?

(ಸಂ) ಹಾಡ್ಯ ಬ.ಜಯಾನಂದ, ಮೈಸೂರು




ಗಂಡ ಹೆಂಡತಿಯರಿಬ್ಬರೂ ಪೇಟೆ ಸುತ್ತಾಡಿಕೊಂಡು ಬರಲು ಹೊರಟರು. ಆಗ ಹೆಂಡತಿಗೆ ಸೀರೆಗಳನ್ನು ಸಾಲಾಗಿ ನೇತುಹಾಕಿದ್ದ ಅಂಗಡಿ ಎದುರು ದಪ್ಪಕ್ಷರದಲ್ಲಿ ಬರೆದಿದ್ದ ಬೋರ್ಡ್ ಒಂದು ಕಾಣಿಸಿತು. ಅದರಲ್ಲಿದ್ದ ಒಕ್ಕಣೆಯನ್ನು ಓದಿಕೊಂಡ ಹೆಂಡತಿ ಹರ್ಷೋದ್ಗಾರದಿಂದ, 'ಅಯ್ಯೋ! ಇಲ್ಲಿ ನೋಡ್ರಿ! ಒಂದಕ್ಕಿಂತ ಇನ್ನೊಂದು ಸೀರೆ ಎಷ್ಟು ಚೆನ್ನಾಗಿದೆ. ಅವುಗಳ ಬೆಲೇನೂ ಸಸ್ತಾ. ಇಲ್ಲಿ ನೋಡಿ ಬನಾರಸಿ ಸೀರೆಗೆ 20 ರೂಪಾಯಿ; ನೈಲಾನ್ ಸೀರೆಗೆ 16 ರೂಪಾಯಿ; ಕಾಟನ್ ಸೀರೆಗೆ 10 ರೂಪಾಯಿ' ಎಂದು ಹೇಳುತ್ತ 'ರಿ ರೀ ರ್ರೀ ಒಂದೈನೂರು ರೂಪಾಯಿ ಕೊಡ್ರೀ. ಎಲ್ಲಾ ಥರಾನ, ಒಂದಷ್ಟು ಕೊಂಡ್ಕೋತೀನಿ. ನನ್ನ ಜೀವಮಾನದಲ್ಲೇ ಇಷ್ಟು ಸಸ್ತಾ ಬೆಲೆಗೆ ಸೀರೆಗಳನ್ನು ಮಾರೋದನ್ನ ನಾನು ನೋಡಿಯೇ ಇಲ್ಲ. ಪ್ಲೀಸ್ ಕೊಡ್ರೀ. ಮುಂದಿನ ತಿಂಗಳ ಪಾಕೆಟ್‌ಮನಿಯಲ್ಲಿ ಹಿಡ್ಕೊಳ್ಳುವಿರಂತೆ' ಎಂದು ಗಂಡನಿಗೆ ದುಂಬಾಲು ಬಿದ್ದಳು.

ಗಂಡ, 'ಅಯ್ಯೋ ಪೆದ್ದ ಹೆಂಗ್ಸೇ, ಸರಿಯಾಗಿ ಕಣ್ಬಿಟ್ಕೊಂಡು ನೋಡೇ. ಇದು ಸೀರೆ ಅಂಗಡಿಯಲ್ಲ ಕಣೇ. ಸೀರೆ ಇಸ್ತ್ರೀ ಮಾಡೋ ಅಂಗಡಿ' ಎಂದು ತಲೆ ಚಚ್ಚಿಕೊಂಡ.

(ಸಂ) ಎಸ್. ವಿಶ್ವನಾಥ, ಮಂಡ್ಯ


